# ಸ್ತ್ರೀಯರೇ ಸ್ವಾವಲಂಬಿಗಳಾಗಿ..

ಸಂ.ಕ. ಸಮಾಚಾರ ಬೆಂಗಳೂರು

ಮನೆಯಲ್ಲಿ ತಂದೆ-ತಾಯಿ, ಹೊರಗಡೆ ಅಣ್ಣ-ತಮ್ಮಂದಿರ ಅವಲಂಬನೆಯಲ್ಲಿಯೇ ಜೀವನ ಸಾಗಿಸುವ ಮನಃಸ್ಥಿತಿಯು ಮಹಿಳೆಯನ್ನು ಎಂದಿಗೂ ಸ್ವಾವಲಂಬಿಯಾಗಿಸುವುದಿಲ್ಲ. ಜೊತೆಗೆ ಸಾಧನೆಯಿಂದ ದೂರ ಮಾಡಿ ಸೀಮಿತ ವ್ಯಾಪ್ತಿಗೊಳಿಸುತ್ತದೆ ಎಂದು ಪಾಂಡಿಚೇರಿ ರಾಜ್ಯಪಾಲೆ ಕಿರಣ್‌ಬೇಡಿ ಹೇಳಿದರು.

ಬಯೋ ಜೆನೆಸಿಸ್ ಹೆಲ್ತ್ ಕ್ಲಸ್ಟರ್ ವತಿಯಿಂದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಜೆ.ಎನ್. ಟಾಟಾ ಆಡಿಟೋರಿಯಂನಲ್ಲಿ ಆಯೋಜಿಸಿದ್ದ 5ನೇ ವಿಶ್ವ ಮಹಿಳಾ ಸಮಾವೇಶ ಉದ್ಘಾಟಿಸಿ ಮಾತನಾಡಿ, ಮಹಿಳೆ ಅವಲಂಬನಾ ಮನಸ್ಥಿತಿಯಿಂದ ಹೊರಬಂದು ಕೌಶಲ್ಯ, ನೈಪುಣ್ಯತೆಯಿಂದ ತನ್ನದೇ ದಾರಿಯಲ್ಲಿ ಮುಂದೆ ಸಾಗಿ ಯಶಸ್ಸನ್ನು ಕಾಣಬೇಕೆಂದು ತಿಳಿಸಿದರು.

ಮಹಿಳೆಯರು ಸ್ವಾಭಾವಿಕವಾಗಿಯೇ ನಾಯಕತ್ವ ಗುಣ ಹೊಂದಿರುತ್ತಾರೆ. ಶ್ರೇಣಿ ಮನಸ್ಥಿತಿಯನ್ನು ಹೊಂದಿರುವುದಿಲ್ಲ. ಜೀವನವೇ ಸಿದ್ಧತೆಯಾಗಿದ್ದು, ನಿರ್ದಿಷ್ಟ ಕಾರಣಗಳಿಗೆ ಸದಾ ಸಿದ್ಧರಾಗುತ್ತಾ ಸಾಗಬೇಕು. ಜನರೊಂದಿಗೆ ಬೆರೆಯಿರಿ, ಹೊಸತನವನ್ನು ಹುಡುಕುವ ಪ್ರಯತ್ನವೇ ಯಶಸ್ಸಿನ ದಾರಿಯಾಗಿದೆ ಎಂದರು.

ನಾನು 23ನೇ ವಯಸ್ಸಿನಲ್ಲಿ ಪೊಲೀಸ್ ವರಿಷ್ಠಾಧಿಕಾರಿ(ಎಸ್‌ಪಿ) ಯಾಗಿದ್ದೆ. ದೈಹಿಕ ಹಾಗೂ ಮಾನಸಿಕ ಸದೃಢತೆಗೆ ಆದ್ಯತೆ ಕೊಡುತ್ತಿದ್ದೆ. ಬೆಳಗ್ಗೆ



ಬಯೋ ಜೆನೆಸಿಸ್ ಹೆಲ್ತ್ ಕ್ಲಸ್ಟರ್‌ನಿಂದ ಆಯೋಜಿಸಿದ್ದ 5ನೇ ವಿಶ್ವ ಮಹಿಳಾ ಸಮಾವೇಶದಲ್ಲಿ ಪುದುಚೇರಿ ರಾಜ್ಯಪಾಲೆ ಕಿರಣ್ ಬೇಡಿ, ಡಾ.ವಿ.ಪಿ. ರಾವ್, ಮೈಸೂರು ಮಹಾರಾಣಿ ಪ್ರಮೋದಾದೇವಿ ಒಡೆಯರ್, ಡಾ. ಕಲ್ಪನಾ ಗೋಪಾಲನ್, ಡಾ. ಪದ್ಮಿನಿ ಪ್ರಸಾದ್ ಪಾಲ್ಗೊಂಡಿದ್ದರು.

ಪೊಲೀಸ್ ಠಾಣೆಗೆ ಹೋಗು ಕೆಳಹಂತದ ಸಿಬ್ಬಂದಿಗಳಿಂದ ತುಂಬಾ ಕಲಿತಿದ್ದೇನೆ. ಬೆಳಗ್ಗೆ ಠಾಣೆಗೆ ಹೋದರೆ ಮೇಲಾಧಿಕಾರಿಗಳು ನೀವು ಯಾಕೆ ಹೋಗುತ್ತೀರಾ..? ಅವರನ್ನೆ ಕರೆಸಿಕೊಳ್ಳಿ ಎಂದು ಹೇಳುತ್ತಿದ್ದರು. ಆದರೆ, ನಾನು ಅವರೊಂದಿಗೆ ಕಲಿಯಲು, ಹೊಸದನ್ನು ತಿಳಿದುಕೊಳ್ಳಲು ಹೋಗುತ್ತಿದ್ದೆ. ಅಧಿಕಾರಿಯಾಗುವ ಮೊದಲು ನಾವು ಮೊದಲು ಒಳ್ಳೆಯ ನಾಗರಿಕರಾಗಬೇಕೆಂದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಲಾಯಿತು. ಸಮಾವೇಶದಲ್ಲಿ ಮಹಿಳೆಯರ ವಿಚಾರದಲ್ಲಿ ಹಿಂದೆ ನಡೆದಿರುವ ಘಟನೆಗಳ ಬಗ್ಗೆ ಚರ್ಚೆ ನಡೆಸಲಾಯಿತು. ಜೊತೆಗೆ ಮಹಿಳೆಯರ ಹಕ್ಕುಗಳಿಗಾಗಿ ಭವಿಷ್ಯದಲ್ಲಿ ಯಾವ ರೀತಿ ಕೆಲಸ ಮಾಡಬೇಕು ಎಂದು ಚಿಂತನ ಮಂಥನ ಮಾಡಲಾಯಿತು.

> ಅಂದಿನ ಕಾಲದಲ್ಲಿ ಸಾಕಷ್ಟು ಸ್ವಾತಂತ್ರ್ಯವಿತ್ತು. ಎಲ್ಲರೂ ಒಂದೇ ಎಂಬ ಭಾವನೆ ಇತ್ತು. ಆದರೆ ಈಗ ಎಲ್ಲವೂ ಬದಲಾಗಿದೆ. ಸಂಸ್ಕೃತಿಯ ಜೊತೆಗೆ ಕೆಲ ವಿಷಯಗಳನ್ನು ಉಳಿಸುವ ಜವಾಬ್ದಾರಿ ಮಹಿಳೆಯರದ್ದಾಗಿದೆ.
>
> -ಪ್ರಮೋದಾದೇವಿ ಒಡೆಯರ್, ಮೈಸೂರು ರಾಜವಂಶಸ್ಥೆ

ಸಮ್ಮೇಳನದಲ್ಲಿ 50ಕ್ಕೂ ಹೆಚ್ಚು ಭಾಷಣಕಾರರು ಭಾಗವಹಿಸಿದ್ದರು. ಮಹಿಳೆಯರಿಗೆ ಸಂಬಂಧಿಸಿದಂತಹ ಆರೋಗ್ಯ ಮತ್ತು ವೈಯಕ್ತಿಕ ಹಣಕಾಸು, ಕಾರ್ಯನಿರ್ವಾಹಕ ನಾಯಕತ್ವ, ಸಣ್ಣ ವ್ಯಾಪಾರ ಮತ್ತು ಉದ್ಯಮಶೀಲತೆ, ಕೆಲಸ ಜೀವನ ಸಮತೋಲನ, ಸಾಮಾಜಿಕ ಮಾಧ್ಯಮ, ವ್ಯಾಪಾರ, ವೃತ್ತಿಪರ ಅಭಿವೃದ್ಧಿ ಮತ್ತು ವೈಯಕ್ತಿಕ ಬೆಳವಣಿಗೆ ಸೇರಿದಂತೆ ಅನೇಕ ವಿಚಾರಗಳ ಬಗ್ಗೆ ಚರ್ಚೆಗಳು ನಡೆದವು.

ಐಪಿಎಸ್ ಅಧಿಕಾರಿಗಳಾದ ಡಾ. ರಶ್ಮಿಕೃಷ್ಣನ್, ಡಾ. ಕಲ್ಪನಾ ಗೋಪಾಲನ್, ಡಾ. ಸೌಮ್ಯ ಮಿಶ್ರಾ, ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ, ವಿಶ್ವ ಮಹಿಳಾ ಸಮಾವೇಶ ಅಧ್ಯಕ್ಷೆ ಡಾ. ಕಾಮಿನಿ ಎ. ರಾವ್, ಕಾರ್ಯದರ್ಶಿ ಡಾ. ಪದ್ಮಿನಿಪ್ರಸಾದ್, ಸಂಚಾಲಕ ಡಾ. ವಿ.ಪಿ. ರಾವ್ ಮತ್ತಿತರರಿದ್ದರು.